(ದಿ.07.08.2025 ರ ಆದೇಶದಂತೆ ಸಾಕ್ಷಿಯನ್ನು 1 ನೇ ಪ್ರತಿವಾದಿಯ ಪರ ಪಾಟೀ ಸವಾಲಿಗೆ ಪುನಃ ಕರೆಸಲಾಗಿದೆ.)

ದಿನಾಂಕಃ 23.08.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: 1 ನೇ ಪ್ರತಿವಾದಿ ಪರ ಶ್ರೀ ಎಸ್.ಡಿ. ವಕೀಲರಿಂದ:**

ನನ್ನ ತಾಯಿ 1 ನೇ ಪ್ರತಿವಾದಿಯಿಂದ ಪ್ರತ್ಯೇಕವಾಗಿ ಸುಮಾರು 10-12 ವರ್ಷವಾಗಿದೆ. ಈಗ ನೋಡುತ್ತಿರುವ ನಿಡಿ-14 ರ ರಾಜೀ ಅರ್ಜಿಯಂತೆ 1 ನೇ ಪ್ರತಿವಾದಿ ನನಗೆ, 2 ನೇ ವಾದಿ ಮತ್ತು ನನ್ನ ತಾಯಿಗೆ ಒಟ್ಟು ರೂ.60 ಲಕ್ಷ ಹಣ ಕೊಡಲು ಒಪ್ಪಿಕೊಂಡಿದ್ದರು ಎಂದರೆ ನನಗೆ ಸರಿಯಾಗಿ ಗೊತ್ತಿಲ್ಲ. ನಿಪಿ-1 ರ ದಾಖಲೆಯನ್ನು ಯಾವ ದಿನಾಂಕ ಪಡೆಯಲಾಗಿದೆ ಎಂದು ನನ್ನಿಂದ ಹೇಳಲು ಆಗುವುದಿಲ್ಲ. ನಿಪಿ-1 ನನ್ನ ಅಜ್ಜನ ಆಸ್ತಿಯ ಸಂಬಂಧ ವಿಭಾಗಪತ್ರವಾಗಿದೆ. 1 ನೇ ಪ್ರತಿವಾದಿಗೆ ಸದರಿ ವಿಭಾಗದಲ್ಲಿ ಬಂದ ಆಸ್ತಿಯನ್ನು 4 ನೇ ಪ್ರತಿವಾದಿಯ ತಂದೆಗೆ ಮಾರಾಟ ಮಾಡಿ ಆ ಹಣದಿಂದ ಹೊಸ ಆಸ್ತಿಯನ್ನು ಖರೀದಿ ಮಾಡಿದ್ದಾರೆ. 1 ನೇ ಪ್ರತಿವಾದಿ ದಿ.18.06.2012 ರಲ್ಲಿ 4 ನೇ ಪ್ರತಿವಾದಿಯ ತಂದೆ ಮಂಜೇಗೌಡರವರಿಗೆ ಜಮೀನು ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಮತ್ತು 2 ನೇ ಪ್ರತಿವಾದಿ ಸದರಿ ಜಮೀನು ಮಾರಾಟ ಬಾಬ್ತು ಸಂಪೂರ್ಣ ಹಣವನ್ನು ಮಂಜೇಗೌಡರವರಿಂದ ಪಡೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ಮಂಜೇಗೌಡರವರಿಗೆ ಬರೆದುಕೊಟ್ಟ ಕ್ರಯಪತ್ರದಲ್ಲಿ 1 ಮತ್ತು 2 ನೇ ಪ್ರತಿವಾದಿ ನನ್ನ ಹಾಗೂ 2 ನೇ ವಾದಿಯ ಗಾರ್ಡಿಯನ್ ಆಗಿ ಸಹಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-17 ರಲ್ಲಿ 1 ಮತ್ತು 2 ನೇ ಪ್ರತಿವಾದಿಗಳು ನನ್ನ ಮತ್ತು 2 ನೇ ವಾದಿಯ ಗಾರ್ಡಿಯನ್ ಆಗಿ ಸಹಿ ಮಾಡಿರುವುದು ಕಾಣುತ್ತಿದೆ ಎಂದರೆ ಸರಿ. ದಾವ ಐಟಂ.ನಂ.4 ರಿಂದ 11 ರ ಆಸ್ತಿಗಳ ಮೇಲೆ ನನಗೆ ಮತ್ತು 2 ನೇ ವಾದಿಗೆ ಯಾವುದೇ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ಅದು ನನ್ನ ಅಜ್ಜನ ಆಸ್ತಿ ಎಂದು ನುಡಿಯುತ್ತಾರೆ. ಮಂಜೇಗೌಡರವರಿಂದ ಪಡೆದುಕೊಂಡ ಕ್ರಯದ ಪ್ರತಿಫಲದ ಬಾಬ್ತು ಹಣದಿಂದ ಬೇರೆ ಜಮೀನುಗಳನ್ನು 1 ಮತ್ತು 2 ನೇ ಪ್ರತಿವಾದಿಗಳು ಖರೀದಿಸಿರುವ ಕಾರಣ ದಾವ ಐಟಂ.ನಂ.4 ರಿಂದ 11 ರ ಆಸ್ತಿಗಳ ಮೇಲೆ ನನಗೆ ಮತ್ತು 2 ನೇ ವಾದಿಗೆ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು 2 ನೇ ಪ್ರತಿವಾದಿಯ ಹೆಸರಿಗೆ ದೇ ವವ್ವಂದ ಗ್ರಾಮದ ಸ.ನಂ.249 ರಲ್ಲಿ 4 ಎಕರೆ 38 ಗುಂಟೆ ಜಮೀನನ್ನು ಕ್ರಯದ ಕರಾರು ಮಾಡಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕ್ರಯದ ಕರಾರಿನ ಪ್ರತಿಫಲವನ್ನು ಮಂಜೇಗೌಡರವರಿಗೆ ಆಸ್ತಿ ಮಾರಾಟ ಮಾಡಿದ ಸಂಬಂಧ ಪಡೆದುಕೊಂಡ ಹಣದಿಂದ ಪಾವತಿಸಲಾಗಿದೆ ಎಂದರೆ ಸರಿಯಲ್ಲ.

1 ಮತ್ತು 2 ನೇ ಪ್ರತಿವಾದಿಯರು ತಮಗೂ ಹಾಗೂ ನನ್ನ ಮತ್ತು 2 ನೇ ವಾದಿಯ ಪರವಾಗಿ ಮೈನರ್ ಗಾರ್ಡಿಯನ್ ಗಳಾಗಿ ದಾವ ಐಟಂ.ನಂ.4 ರಿಂದ 11 ರ ಜಮೀನುಗಳನ್ನು 4 ನೇ ಪ್ರತಿವಾದಿಯ ತಂದೆಗೆ ಮಾರಾಟ ಮಾಡಿರುವ ಕಾರಣ ಸದರಿ ಜಮೀನುಗಳ ಮೇಲಿನ 4 ನೇ ಪ್ರತಿವಾದಿಯ ಹಕ್ಕಿಗೂ ನಮಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ದಾವ ಐಟಂ.ನಂ.1 ರಿಂದ 3 ರ ಜಮೀನುಗಳನ್ನು 1 ನೇ ಪ್ರತಿವಾದಿಯು ಯಾರಿಂದ ಖರೀದಿಸಿದ್ದು ಎಂದು ನನಗೆ ಅವರ ಹೆಸರು

ಗೊತ್ತಿಲ್ಲ, ಆದರೆ ನನ್ನ ಅಜ್ಜನ ಆಸ್ತಿ ಮಾರಾಟ ಮಾಡಿ ಬಂದ ಹಣದಿಂದ ಆ ಜಮೀನುಗಳನ್ನು ಖರೀದಿಸಿದ್ದಾರೆ. ನಿಡಿ-14 ರಲ್ಲಿ ನನ್ನ ಮತ್ತು 2 ನೇ ವಾದಿಯ ಗಾರ್ಡಿಯನ್ ಆಗಿ ನನ್ನ ತಾಯಿ ಸಹಿ ಮಾಡಿದ್ದಾರೆ ಎಂದರೆ ಸರಿ. ನಿಡಿ-14 ರ ಪ್ರಕಾರ ಯಾವ ಜಮೀನು ಮಾರಾಟ ಮಾಡಿ 1 ನೇ ಪ್ರತಿವಾದಿಯು ನಮಗೂ ಮತ್ತು 2 ನೇ ಪ್ರತಿವಾದಿಗೆ ಹಣ ಕೊಡುವುದಾಗಿ ಹೇಳಿದ್ದರು ಎಂದು ನನಗೆ ಗೊತ್ತಿಲ್ಲ. ನಿಡಿ-14 ರ ಬಗ್ಗೆ ನಾನು 2 ನೇ ಪ್ರತಿವಾದಿಯನ್ನು ಸಂಪೂರ್ಣವಾಗಿ ವಿಚಾರಿಸಿಲ್ಲ. 2 ನೇ ಪ್ರತಿವಾದಿ ಸತ್ಯವನ್ನು ಮರೆಮಾಚಿ ನನ್ನ ಮತ್ತು 2 ನೇ ವಾದಿಯ ಮೂಲಕ ಈ ಸುಳ್ಳು ದಾವೆ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ಸ.ನಂ.249 ರಲ್ಲಿ 4 ಎಕರೆ 38 ಗುಂಟೆ ಜಮೀನನ್ನು 1 ಮತ್ತು 2 ನೇ ಪ್ರತಿವಾದಿಯರು ಸೇರಿ 4 ನೇ ಪ್ರತಿವಾದಿಯ ಸಹೋದಾರ ಪ್ರದೀಪ್ ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆ ಜಮೀನು ಮಾರಾಟದ ಬಾಬ್ತು ಪ್ರದೀಪ್ ರವರು 1 ನೇ ಪ್ರತಿವಾದಿಯ ಮೂಲಕ ನಿಡಿ-14 ರಲ್ಲಿ ಒಪ್ಪಿರುವಂತೆ ರೂ.60 ಲಕ್ಷ ಹಣವನ್ನು ನಮಗೆ ಕೊಡುವುದೆಂದು ಮಾತುಕತೆಯಾಗಿತ್ತು ಎಂದರೆ ನನಗೆ ಗೊತ್ತಿಲ್ಲ.

ದಾವ ಐಟಂ.ನಂ.1 ರಿಂದ 3 ರ ಜಮೀನುಗಳ ಖಾತೆಯನ್ನು ಕ್ರಯಪತ್ರದ ಆಧಾರದ ಮೇಲೆ 3 ನೇ ಪ್ರತಿವಾದಿಯ ಹೆಸರಿಗೆ ಮಾಡಬಾರದು ಎಂದು ನನ್ನ ಪರವಾಗಿ 2 ನೇ ಪ್ರತಿವಾದಿಯು ತಾಲ್ಲೂಕು ಕಚೇರಿಗೆ ಅರ್ಜಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಈಗ ನೋಡುತ್ತಿರುವ ನಿಡಿ-16 ರ ದಾಖಲೆ ಸದರಿ ಅರ್ಜಿಯ ಆಧಾರದ ಮೇಲೆ ಆಗಿರುವ ಆದೇಶ ಎಂದರೆ ನನಗೆ ಗೊತ್ತಿಲ್ಲ. ದಾವ ಐಟಂ.ನಂ.1 ರಿಂದ 3 ರ ಜಮೀನುಗಳ ಖಾತೆಯನ್ನು 3 ನೇ ಪ್ರತಿವಾದಿಯ ಹೆಸರಿಗೆ ಮಾಡಿಕೊಡಲು 2 ನೇ ಪ್ರತಿವಾದಿಯು ನನ್ನ ಮತ್ತು 2 ನೇ ವಾದಿಯ ಪರವಾಗಿ ಒಪ್ಪಿಗೆ ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 2014-15 ನೇ ಇಸವಿಯಲ್ಲಿ ನಾನು ಬೋರ್ಡಿಂಗ್ ಸ್ಕೂಲ್ ನಲ್ಲಿ ಇದ್ದೆ. ಆ ಸಮಯಕ್ಕೆ ನಾನು, 2 ನೇ ವಾದಿ, 1 ಮತ್ತು 2 ನೇ ಪ್ರತಿವಾದಿ ಒಂದೇ ಮನೆಯಲ್ಲಿ ಇದ್ದೆವು. ನಾವು 2 ನೇ ಪ್ರತಿವಾದಿಯೊಂದಿಗೆ ಯಾವ ವರ್ಷ ಬೆಂಗಳೂರಿಗೆ ಹೋಗಿದ್ದು ಎಂದು ನನಗೆ ನೆನಪಿಲ್ಲ. 3 ನೇ ಪ್ರತಿವಾದಿಗೆ ಜಮೀನು ಮಾರಾಟ ಮಾಡಿದ ಬಾಬ್ತು ಬಂದ ಹಣವನ್ನು 1 ನೇ ಪ್ರತಿವಾದಿಯಿಂದ ನಾವು ಮತ್ತು 2 ನೇ ಪ್ರತಿವಾದಿ ಪಡೆದುಕೊಂಡು ಬೆಂಗಳೂರಿಗೆ ಹೋಗಿ ಪಿ.ಜಿ. ನಡೆಸುತ್ತಿದ್ದೆವು ಎಂದರೆ ಸಾಕ್ಷಿಯು ಪಿ.ಜಿ. ನಡೆಸುತ್ತಿದ್ದೆವು, ಆದರೆ 1 ನೇ ಪ್ರತಿವಾದಿಯಿಂದ ನಮಗೆ ಯಾವುದೇ ಹಣ ಬಂದಿಲ್ಲ ಎಂದು ನುಡಿಯುತ್ತಾರೆ. 2 ನೇ ಪ್ರತಿವಾದಿ ಬೆಂಗಳೂರಿಗೆ ಹೋಗುವ ಪೂರ್ವದಲ್ಲಿ ಯಾವುದೇ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿ.

ದಾವ ಐಟಂ.ನಂ.4 ರಿಂದ 11 ರ ಜಮೀನು ಮಾರಾಟದಿಂದ ಬಂದ ಹಣವನ್ನು ನಾನು, 2 ನೇ ವಾದಿ ಮತ್ತು 2 ನೇ ಪ್ರತಿವಾದಿಯು 1 ನೇ ಪ್ರತಿವಾದಿಯಿಂದ ಪಡೆದುಕೊಂಡಿದ್ದೇವೆ ಎಂದರೆ ಸರಿಯಲ್ಲ. ದಾವ ಜಮೀನುಗಳ ಮಾರಾಟದಿಂದ ಬಂದ ಹಣವನ್ನು ನಾನು, 2 ನೇ ವಾದಿ ಮತ್ತು 2 ನೇ ಪ್ರತಿವಾದಿ ಪಡೆದುಕೊಂಡಿದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವ ಜಮೀನುಗಳ ಮೇಲೆ ನಮಗೆ ಯಾವುದೇ ಹಕ್ಕು ಅಧಿಕಾರ ಇಲ್ಲದೇ ಇದ್ದರೂ ನಾನು ಸುಳ್ಳು ಪ್ರತಿಪಾಧನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಯನ್ನು ಸಲ್ಲಿಸಲು ನಮಗೆ ಯಾವುದೇ ವ್ಯಾಜ್ಯ ಕಾರಣ ಇಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

ಅ.ದಾ.57/2019 ಪಿಡಬ್ಲ್ಯೂ-1

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.